


# ಚಕ್ರವ್ಯೂಹದಲ್ಲಿ ಕಾರು..!



ಈ ಚಿತ್ರಗಳನ್ನು ನೋಡಿ ಇದೆಂಥ ಚಕ್ರವ್ಯೂಹ ಎಂದುಕೊಂಡಿರುತ್ತೀರಿ ಅಲ್ವಾ? ಚಕ್ರವ್ಯೂಹದಂತೆಯೇ ಕಾಣಿಸುವ ಇದು ಕಾರು ಪಾರ್ಕಿಂಗ್ ಜಾಗ!

ವಿಶ್ವದ ಅತ್ಯುತ್ತಮ ಕಾರು ಪಾರ್ಕಿಂಗ್ ಎನಿಸಿರುವ ಈ ಸ್ಥಳ ಇರುವುದು ಜರ್ಮನಿಯಲ್ಲಿ. ಇದರ ಹೆಸರು ಫೋಕ್ಸ್‌ವ್ಯಾಗನ್ ಕಾರು ಪಾರ್ಕಿಂಗ್ ಟವರ್. ಹೌದು, ಹೆಸರೇ ಹೇಳುವಂತೆ ಇದು ಫೋಕ್ಸ್‌ವ್ಯಾಗನ್ ಕಾರುಗಳಿಗೆ ಮಾತ್ರ ಸೀಮಿತ. ವೂಲ್ಸ್‌ಬರ್ಗ್‌ನಲ್ಲಿರುವ ಫೋಕ್ಸ್‌ವ್ಯಾಗನ್ ತಯಾರಿಕಾ ಕಾರ್ಖಾನೆಯಲ್ಲಿ ತಯಾರಿಸಲಾದ ಹೊಸ ಕಾರುಗಳನ್ನು ಇಲ್ಲಿ ಶೇಖರಿಸಿ ಇಡಲಾಗುತ್ತಿದೆ. ಕಾರ್ಖಾನೆಯಿಂದ ಸುಮಾರು 700 ಮೀಟರ್ ಭೂಗತ ಸುರಂಗವನ್ನು ಕೊರೆಯಲಾಗಿದ್ದು, ಟವರ್‌ಗೆ ನೇರ ಸಂಪರ್ಕ ಇಡಲಾಗಿದೆ. ಇಲ್ಲಿಂದ 'ಕಸ್ಟಮರ್ ಸೆಂಟರ್' ಕಡೆ ಕಾರು ಸ್ವಯಂಚಾಲಿತವಾಗಿ ಸಾಗುತ್ತದೆ. ಅಲ್ಲಿಯೇ ಗ್ರಾಹಕರಿಗೂ ಅದನ್ನು ನೋಡುವ ವ್ಯವಸ್ಥೆ ಕಲ್ಪಿಸಲಾಗಿದೆ. ರೊಬೋಟಿಕ್ ವ್ಯವಸ್ಥೆಯಿಂದ ಕಾರನ್ನು ಕೆಳಕ್ಕೆ ಇಳಿಸಿ ಗ್ರಾಹಕರಿಗೆ ತೋರಿಸಲಾಗುವುದು. ಕಳೆದ ವರ್ಷ ಇದೇ ವ್ಯವಸ್ಥೆಯ ಮೂಲಕ 1,75,893 ಗ್ರಾಹಕರು ಕಾರು ಖರೀದಿಸಿದ್ದರು.

ಅಂದ ಹಾಗೆ, ಇದೇ ರೀತಿಯ ಇನ್ನೆರಡು ಪಾರ್ಕಿಂಗ್ ಟವರ್‌ಗಳು ಇಲ್ಲಿವೆ. ಪ್ರತಿಯೊಂದು ಟವರ್ 60 ಮೀಟರ್ ಎತ್ತರವಿದೆ. ಇದರಲ್ಲಿ ತಲಾ 400 ಕಾರುಗಳನ್ನು ಪಾರ್ಕ್ ಮಾಡಬಹುದು. ಪ್ರತಿ ಸೆಕೆಂಡಿಗೆ ಎರಡು ಮೀಟರ್ ವೇಗದಲ್ಲಿ ಖಾಲಿ ಇರುವ ಜಾಗದಲ್ಲಿ ಕಾರು ಪಾರ್ಕಿಂಗ್ ಆಗಲಿದೆ. ರಾತ್ರಿಯ ವೇಳೆ ಇಲ್ಲಿಗೆ ಹೋದರೆ ಟವರ್ ಮಿಂಚುತ್ತಿರುತ್ತದೆ. ಕಾರಣ, ಇದನ್ನು ಸ್ಟೀಲ್ ಹಾಗೂ ಗಾಜಿನಿಂದ ತಯಾರಿಸಿರುವುದು.

■ ಸಿಂಚನಾ ಎಸ್.ಎನ್.

